**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂಖ್ಯೆ:ಜಕೃನಿ/ಕೃಯಾಂ./ಕೃ.ಉ.ಸಂ./ಟಾರ್ಪ್/ಸು-5/2017-18

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 12-03-2018.

ರವರಿಗೆ,

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು.

**<u>ಸುತ್ತೋಲೆ – 5</u>**

ವಿಷಯ: ಕೃಷಿ ಪರಿಕರ ಮತ್ತು ಗುಣ ನಿಯಂತ್ರಣ (ಲೆ.ಶೀ.2401-00-103-0-15) ಯೋಜನೆಯಡಿ ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿಯಲ್ಲಿ ರಿಯಾಯಿತಿ ದರದಲ್ಲಿ ಟಾರ್ಪಲೀನ್‌ಗಳ ಸರಬರಾಜಿಗೆ ಅರ್ಹಗೊಂಡ ಸಂಸ್ಥೆಯ ಬಗ್ಗೆ.

ಉಲ್ಲೇಖ:1. ಈ ಕಚೇರಿಯ ಸುತ್ತೋಲೆ ಸಂಖ್ಯೆ: ಉಕೃನಿ /ಕೃಯಾಂ&ಸೂನೀ /ಕೃ.ಉ.ಸಂ./ ಅನುಷ್ಠಾನ/ ಸುತ್ತೋಲೆ/2017-18, ದಿನಾಂಕ:04-05-2017.

2. ಇಲಾಖೆ ಟಾರ್ಪಲೀನ್ EOI ಪ್ರಕಟಣೆ ಸಂ: DDA/FM&MI/A/PRO/EOI Tarp/2017-18. Dated: 17-07-2017.

3. ಈ ಕಛೇರಿಯ ಸುತ್ತೋಲೆ-3 & 4ರ,ಸಂ:ಉಕೃನಿ/ಕೃಯಾಂ&ಸೂನೀ/ಕೃ.ಉ.ಸಂ./ಟಾರ್ಪ್/ಸು-3/2017-18. ದಿನಾಂಕ: 14-11-2017 & 15-11-2017.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ರೈತರಿಗೆ ಸಹಾಯಧನದಲ್ಲಿ 250 GSM (±2%), black colour HDPE Tarpaulins conforming IS:7903/2011 manufactured in 05 layers ಟಾರ್ಪಲೀನ್‌ಗಳನ್ನು ವಿತರಿಸಲು ಇ-ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಅರ್ಹಗೊಂಡ ಸಂಸ್ಥೆಗಳು ಇಲಾಖೆಯ ಕಾರ್ಯಕ್ರಮದಡಿಯಲ್ಲಿ ನೀಡಬೇಕಾದ ದರಗಳನ್ನು ಅಂತಿಮಗೊಳಿಸಲಾಗಿದೆ. ಈಗಾಗಲೇ ಉಲ್ಲೇಖ(3)ರನ್ವಯ ಸುತ್ತೋಲೆ-3 & 4 ಗಳನ್ನು ತಮಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ.

ಮುಂದುವರೆದು, ಟಾರ್ಪಲೀನ್‌ಗಳನ್ನು ಸರಬರಾಜು ಮಾಡಲು **ಹೆಚ್ಚುವರಿಯಾಗಿ** ಉತ್ಪಾದಕ ಸಂಸ್ಥೆಗಳು, ವಿತರಕರು/ಸರಬರಾಜುದಾರರನ್ನು ಆಯ್ಕೆ ಮಾಡಲಾಗಿದ್ದು, ಹೆಚ್ಚುವರಿಯಾಗಿ ಆಯ್ಕೆ ಮಾಡಲಾದ ಸಂಸ್ಥೆಯ ದರ ಕರಾರಿನ ಅವಧಿಯು ಅವಧಿಯು **31-03-2019ರ** ವರೆಗೆ ಮಾತ್ರ ಜಾರಿಯಲ್ಲಿ ಇರುತ್ತದೆ. ಹೆಚ್ಚುವರಿಯಾಗಿ ಆಯ್ಕೆಯಾದ ಸಂಸ್ಥೆಯ ವಿವರಗಳನ್ನು ಈ ಸುತ್ತೋಲೆಯೊದಿಗೆ ಲಗತ್ತಿಸಿದೆ. ಈಗಾಗಲೇ ಸುತ್ತೋಲೆ-3&4 ರಲ್ಲಿ ಸೂಚಿಸಿರುವ ಸಂಸ್ಥೆಗಳೊಂದಿಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಸಂಸ್ಥೆಯನ್ನು ಸಹ ಪರಿಗಣಿಸಿ ಟಾರ್ಪಾಲೀನ್‌ಗಳನ್ನು ಈಗಾಗಲೇ ನೀಡಿರುವ ಅನುಮೋದಿತ ಕಾರ್ಯಕ್ರಮ ಹಾಗೂ ಮಾರ್ಗಸೂಚಿ ಅನ್ವಯ (ಉಲ್ಲೇಖ:1) ವಿತರಿಸುವುದು.

**ಸೂಚನೆ:**

1. ಟಾರ್ಪಲೀನ್‌ಗಳ ಸರಬರಾಜು ಆದೇಶ(Indent) ನೀಡುವ ಮುನ್ನ IS:7903/2011 BIS ಪರವಾನಗಿಯನ್ನು ಪರಿಶೀಲಿಸಿ ಅವಧಿ ಮುಗಿದ ಸಂಸ್ಥೆಗಳ ಟಾರ್ಪಲೀನ್‌ಗಳನ್ನು ನವೀಕೃತ ವರದಿ ಬಂದ ನಂತರವಷ್ಟೇ ವಿತರಿಸಲು ಕ್ರಮವಹಿಸುವುದು.

2. ಅನುಬಂಧದಲ್ಲಿ ನೀಡಿರುವ ಸಂಸ್ಥೆಗಳಿಂದ ಟಾರ್ಪಾಲೀನ್‌ಗಳಿಗೆ ಸರಬರಾಜು ಆದೇಶ(Indent) ನೀಡಬಹುದಾಗಿರುತ್ತದೆ.

3. ನಿಗದಿತ ಸಮಯದೊಳಗಾಗಿ ಸರಬರಾಜು ಮಾಡುವಂತೆ ಸರಬರಾಜು ಆದೇಶದಲ್ಲಿ ಸಂಸ್ಥೆಗಳಿಗೆ ತಿಳಿಸುವುದು.

4. ಒಬ್ಬ ರೈತರಿಗೆ ಯಾವುದೇ ಅಳತೆಯ ಒಂದು ಟಾರ್ಪಾಲೀನ್ ಅನ್ನು ಮಾತ್ರ ಮಾರ್ಗಸೂಚಿಯನ್ವಯ ನಿಯಮಾನುಸಾರ ಸಹಾಯಧನದಲ್ಲಿ ವಿತರಿಸುವುದು.

5. ಸಂಸ್ಥೆಗಳಿಂದ ಸರಬರಾಜು ಪಡೆಯುವ ಮುನ್ನ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಜಂಟಿ ಕೃಷಿ ನಿರ್ದೇಶಕರು (8x6mtrs) ಹಾಗೂ ರೈತ ಸಂಪರ್ಕ ಕೇಂದ್ರಗಳು (1x1mtrs) ಎರಡು ವಿದದ ಮಾದರಿಗಳನ್ನು ಕಡ್ಡಾಯವಾಗಿ ಪಡೆಯುವುದು.

6. ಉತ್ಪಾದಕ ಸಂಸ್ಥೆಗಳು/ವಿತರಕರು/ಸರಬರಾಜುದಾರರು ನೀಡುವ ಬಿಲ್ಲಿನಲ್ಲಿ GST No. ನಮೂದಿಸಿರುವುದನ್ನು ಖಚಿತಪಡಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳುವುದು.

7. ಕಡಿಮೆ/ಕಳಪೆ ಗುಣಮಟ್ಟದ ಟಾರ್ಪಾಲೀನ್‌ಗಳನ್ನು ಆಯ್ಕೆಯಾಗಿರುವ ಸಂಸ್ಥೆಗಳು ಸರಬರಾಜು ಮಾಡಿದಲ್ಲಿ ಅಥವ ರೈತರಿಂದ ದೂರುಗಳು ಬಂದಲ್ಲಿ ಜಂಟಿ ಕೃಷಿ ನಿರ್ದೇಶಕರು ಸರಬರಾಜಾದ ಟಾರ್ಪಾಲೀನ್‌ಗಳ ಮಾದರಿಯನ್ನು(Sample) ಭಾರತೀಯ ಅಧಿಕೃತ BIS ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಕಳುಹಿಸುವುದು ಹಾಗೂ ಪರೀಕ್ಷಗೆ ತಗಲುವ ಶುಲ್ಕವನ್ನು ಸಂಬಂಧಪಟ್ಟ ಸಂಸ್ಥೆಗಳು/ ವಿತರಕರಿಂದ ಭರಿಸತಕ್ಕದು.

8. ಟಾರ್ಪಾಲೀನ್ ಸರಬರಾಜಿಗೆ ಸಂಬಂಧಿಸಿದಂತೆ Expression of Interest (EOI) ಮತ್ತು ಸಂಸ್ಥೆಗಳೊಂದಿಗೆ ಮಾಡಿಕೊಂಡ ಒಡಂಬಡಿಕೆ(MOU) ಕರಡು ಪ್ರತಿಯನ್ನು ಸಹ ಈ ಪತ್ರದೊಂದಿಗೆ ಲಗತ್ತಿಸಿದ್ದು ಇದರಲ್ಲಿ ಸೂಚಿಸಿರುವಂತೆ ನಿಯಮಾನುಸಾರ ಅಗತ್ಯ ಕ್ರಮವಹಿಸುವುದು.

ಕೃಷಿ ನಿರ್ದೇಶಕರು

**ಪ್ರತಿಯನ್ನು:**

1. ಕೃಷಿ ಆಯುಕ್ತರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ ನೀಡಲಾಗಿದೆ.
2. ಸಂಬಂಧಪಟ್ಟ ಸಂಸ್ಥೆಗೆ ಕಳುಹಿಸುತ್ತಾ Expression of Interest (EOI) ಮತ್ತು ಇಲಾಖೆಯೊಂದಿಗೆ ಮಾಡಿಕೊಂಡ ಒಡಂಬಡಿಕೆ(MOU) ಅನ್ವಯ ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

## Annexure

**Details of the Rates agreed upon for the supply of 250GSM (±2%), Black colour HDPE Tarpaulins conforming to IS:7903/2011 manufactured in 5 layers.**

| Sl. No. | Size of Tarpaulins (in meters) | Rate agreed upon (in Rupees) | Subsidy at 50% (in Rupees) | Subsidy at 90% (in Rupees) |
|---|---|---|---|---|
| 1 | 8X6 | 1998.00 | 999.00 | 1798.20 |
| 2 | 10X10 | 4162.00 | 2081.00 | 3745.80 |

**Details of Additional manufacturing companies and the Authorized distributors for the supply of 250GSM (±2%), Black colour HDPE Tarpaulins conforming to IS:7903/2011 manufactured in 5 layers.**

| Sl. No | Manufacturer | Authorized Distributor | BIS Licence validity |
|---|---|---|---|
| 20. | M/s.Shree Ambica Geotex Private Limited, No.15, Saijpur Shahwadi Road, Saijpur Gopalpur, Narol, Ahmedabad – 382405 Gujart . (Ph# 09824640625/ 09082499440) | - | CM/L 3777280 **Valid upto 22-11-2019** |

Director of Agriculture